# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಭಾ ನಡವಳಿ ನಿರ್ಣಯ

**ದಿನಾಂಕ: 13/02/2019 ರಂದು ನಡೆದ ವಾರ್ಡ್ ಸಂಖ್ಯೆ.31 ಕುಶಾಲನಗರದಲ್ಲಿ ನೆಡೆದ ವಾರ್ಡ್ ಸಮಿತಿಯ ತುರ್ತು-ಸಭಾ ನಡವಳಿ ನಿರ್ಣಯ**

ಸಭೆಯಲ್ಲಿ ಉಪಸ್ಥಿತರು

| ಕ್ರಮ ಸಂಖ್ಯೆ | ಸಭಾ ನಡವಳಿಯಲ್ಲಿ ಹಾಜರಿದ್ದವರ ಹೆಸರು | ಪದನಾಮ | ಸಹಿ |
|---|---|---|---|
| 1 | ಶ್ರೀಮತಿ. ಉಮ್ಮೇ ಸಲ್ಮಾ, ಖಮರ್ ಬಾಷ | ಮಾನ್ಯ ಅಧ್ಯಕ್ಷರು/ ಪಾಲಿಕೆ ಸದಸ್ಯರು | [signature] |
| 2 | ಶ್ರೀ. ವೆಂಕಟೇಶ್ | ಸದಸ್ಯರು | |
| 3 | ಶ್ರೀಮತಿ.ಕಸ್ತೂರಿ | ಸದಸ್ಯರು | |
| 4 | ಶ್ರೀಮತಿ.ಜೆನ್ನಿಫರ್ | ಸದಸ್ಯರು | Jennifer R. |
| 5 | ಶ್ರೀಮತಿ.ಫಾತಿಮಾ | ಸದಸ್ಯರು | |
| 6 | ಶ್ರೀಮತಿ. ಅಮ್ಮು | ಸದಸ್ಯರು | Ammu. H |
| 7 | ಶ್ರೀ. ಮೊಹಮ್ಮದ್ ಅನ್ಸರ್ | ಸದಸ್ಯರು | |
| 8 | ಶ್ರೀ.ಖಮರ್ ಬಾಷ | ಸದಸ್ಯರು | [signature] |
| 9 | ಶ್ರೀ.ಫೈರೋಜ್ ಖಾನ್ | ಸದಸ್ಯರು | |
| 10 | ಶ್ರೀ.ಜಾವೀದ್ ಪಾಷ | ಸದಸ್ಯರು | [signature] |

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಸ.ಕಂ.ಅ(ಪು.ನ)ಪಿಆರ್//03/18-19

ಸಹಾಯಕ ಕಂದಾಯ ಅಧಿಕಾರಿರವರ ಕಛೇರಿ,
(ಪುಲಿಕೇಶಿನಗರ)ಉಪವಿಭಾಗ, ಕ್ವೀನ್ಸ್ ರಸ್ತೆ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ದಿನಾಂಕ :

ದಿನಾಂಕ: 13/02/2019 ರಂದು ವಾರ್ಡ್-31 ರ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-

**ಸಭೆಗೆ ಹಾಜರಿದ್ದವರು:**ಬಿಬಿಎಂಪಿ, ವಾರ್ಡ್ ಸಂಖ್ಯೆ: 31 ರ ಮಾನ್ಯ ಸದಸ್ಯರು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರಾದ ಶ್ರೀಮತಿ. ಉಮ್ಮೇ ಸಲ್ಮಾ, ಖಮರ್ ಬಾಷ

1. ಸಹಾಯಕ ಕಂದಾಯ ಅಧಿಕಾರಿ(ಕೆ.ಜಿ.ಹಳ್ಳಿ) ಹಾಗೂ ವಾರ್ಡ್ ಸಮಿತಿ ಕಾರ್ಯದರ್ಶಿ ಶ್ರೀಮತಿ.ರಾಧ.ಚಂ.ಬಡಿಗೇರ
2. ವಾರ್ಡ್ ಸಮಿತಿಯ ಸಮಿತಿ ಸದಸ್ಯರು ಸಭೆಗೆ ಹಾಜರಿದ್ದರು.
3. ಸಹಾಯಕ ಕಾರ್ಯಪಾಲಕ ಅಭಿಯಂತರರು ಪುಲಕೇಶಿನಗರ.
4. ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು/ವಿದ್ಯುತ್/ ಸ್ಟ್ರೀಟ್‌ಲೈಟ್/ ಕಂದಾಯ ಪರಿವೀಕ್ಷಕರು/ಕಂದಾಯ ವಸೂಲಿಗಾರರು/ಕಛೇರಿ ನೌಕರರು.

ವಾರ್ಡ್ ಸಮಿತಿಯ ಸಭೆಯು ಪ್ರಾರಂಭಗೊಳ್ಳುತ್ತಿದ್ದಂತೆ ಅದ್ಯಕ್ಷರು, ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವಾಗತಿಸಿದರು.

ಸದರಿ ಸಭೆಯಲ್ಲಿ ಮಾನ್ಯ ಅಧ್ಯಕ್ಷರು ಕುಂದು ಕೊರತೆಗಳ ಬಗ್ಗೆ ತಪ್ಪದೇ ಕ್ರಮ ಕೈಗೊಳ್ಳಲು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ವರದಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ.

**1. ಬೆಸ್ಕಾಂ:-**

ವಾರ್ಡ್-31ರ ವ್ಯಾಪ್ತಿಯಲ್ಲಿ ವಿದ್ಯುತ್ ಕಂಬಗಳಲ್ಲಿ ಕೆಳಗೆ ಜಗ್ಗಿರುವ ಕೇಬಲ್‌ಗಳನ್ನು ಸರಿಪಡಿಸುವುದು, ಕುಶಾಲನಗರದಲ್ಲಿ ಕೆಲವೊಂದು ಕಡೆ ಕೇಬಲ್‌ಗಳಿಗೆ ದಾರ ಕಟ್ಟಿರುವುದನ್ನು ಸರಿಪಡಿಸುವುದು, ಕಾಮರಾಜ್ ಶಾಲೆಯ ಮೂಲೆಯಲ್ಲಿರುವ ಪೋಲ್ ಮತ್ತು ಟ್ರಾನ್ಸ್‌ಫಾರಂನ್ನು ಬದಲಾಯಿಸುವುದು, ವಾರ್ಡ್-31ರಲ್ಲಿ ಎಲ್ಲೆಲ್ಲಿ ಕೇಬಲ್ ಹಾಕಿರುವ ಬಗ್ಗೆ ಹಾಗೂ ಬಾಕಿಯಿರುವ ಬಗ್ಗೆ ಮಾಹಿತಿಯನ್ನು ನೀಡುವುದು. ಅಂಡರ್ ಗ್ರೌಂಡ್ ಕೇಬಲ್ ಬಗ್ಗೆ ಪ್ರಪೋಜಲ್ ನೀಡಿರುವ ಬಗ್ಗೆ ಮಾಹಿತಿ ನೀಡುವುದು, ಕರುಮಾರಿಯಮ್ಮನಗರದಲ್ಲಿ ಹೆಚ್ಚಾಗಿ ವಿದ್ಯುತ್ ಕಡಿತಗೊಳಸುವುದನ್ನು ಸರಿಪಡಿಸುವುದು. ಹೊಸ ಪೋಲ್ ಹಾಕಿರುವ ಬಗ್ಗೆ ವರದಿ ನೀಡುವುದು. ಎ.ಬಿ ಕೇಬಲ್ ಎಲ್ಲೆಲ್ಲಿ ಹಾಕಿರುವ ಬಗ್ಗೆ ಮಾಹಿತಿ ನೀಡುವುದು. ಈಗಾಗಲೇ ಹಾಕಿರುವ ಟಿ.ಸಿ ಪೈಪ್‌ಗಳನ್ನು ಬದಲಿಸಿ ಬ್ರಾಡೆಂಡ್ ಟಿ.ಸಿ ಪೈಪ್‌ಗಳನ್ನು ಹಾಕುವಂತೆ ಸೂಚಿಸಿದರು. ಟ್ರಾನ್ಸ್‌ಫಾರಂಗಳನ್ನು ಹೊಸದಾಗಿ ಹಾಕಬೇಕಾಗಿರುವುದರ ಬಗ್ಗೆ ಮಾಹಿತಿ ಹಾಗೂ ಹಾಕಿರುವ ಬಗ್ಗೆ ಮಾಹಿತಿ ನೀಡುವುದು, ಇನ್ನು ಎಷ್ಟು ಟ್ರಾನ್ಸ್‌ಫಾರಂಗಳು ಇದೆ ಎಂಬ ಮಾಹಿತಿಯನ್ನು ನೀಡುವುದು. ಅನ್ವರ್ ಲೇಔಟ್ ಮೂಲೆಯಲ್ಲಿ ಪೋಲ್‌ನ್ನು ಸರಿಪಡಿಸುವುದು ಹಾಗೂ ಪ್ರತಿ ಶುಕ್ರವಾರದಂದು ವಿದ್ಯುತ್ ಕಡಿತಗೊಳಸುವುದನ್ನು ಸರಿಪಡಿಸುವುದು.

**2. ಬಿಡಬ್ಲ್ಯೂಎಸ್‌ಎಸ್‌ಬಿ:-**

ಮುಸ್ಲಿಂ ಕಾಲೋನಿ, ಅನ್ವರ್ ಲೇಔಟ್, ರಾಮ ಟೆಂಟ್ ರಸ್ತೆಯಲ್ಲಿ ಪೈಪ್‌ಗಳನ್ನು ಸರಿಪಡಿಸುವುದು, ವಾರ್ಡ್ ಮತ್ತು ಅಮೀನ್ ಮಸೀದಿಯ ನಡುವೆ ಇರುವ ಪೈಪ್‌ಗಳನ್ನು ಸರಿಪಡಿಸಲು ಸೂಚಿಸಿದರು. ಅಶೋಕನಗರ, ದೊಡ್ಡಣ್ಣನಗರಕ್ಕೆ ವಾರಕ್ಕೆ 2 ಬಾರಿ ನೀರು ನೀಡಲು ಸೂಚಿಸಿದರು. ಮುನೇಶ್ವರನಗರದಲ್ಲಿರುವ ಚೇಂಬರ್ ಸರಿಪಡಿಸುವುದು, ಅನ್ವರ್ ಲೇಔಟ್‌ಗೆ 2 ಮತ್ತು 3ನೇ ಕ್ರಾಸ್‌ಗೆ ವಾರಕ್ಕೆ 2 ಬಾರಿ ನೀರು ನೀಡುವುದು. ಕೆಲವು ರಸ್ತೆಗಳಲ್ಲಿ ಕಾಂಕ್ರೀಟ್ ಹಾಕಿರುವ ಬಗ್ಗೆ ಪತ್ರದ ಮುಖಾಂತರ ಮಾಹಿತಿಯನ್ನು ನೀಡುವುದು. ದುರಸ್ಥಿಯಾಗಿರುವ ಪೈಪ್‌ಗಳನ್ನು ಸರಿಪಡಿಸುವುದು, ಫ್ರಫೋಜಲ್ ಬಗ್ಗೆ ಹಾಗೂ ಪೈಪ್‌ಗಳ ಬಗ್ಗೆ ಮಾಹಿತಿ ನೀಡುವುದು. ಪಾರ್ಕ್ ಪಕ್ಕದಿಂದ ರಾಮ ಟೆಂಟ್ ಡೌನ್‌ನಲ್ಲಿ ಪೈಪ್ ಕಟ್ ಮಾಡಿರುವುದರಿಂದ ಅಮೀನ್ ಮಸೀದಿ ಹತ್ತಿರ ಬ್ಲಾಕ್ (ಕಲ್ಯಾಣ ಮಂಟಪ)ಹಾಗುತ್ತಿರುವುದನ್ನು ಸರಿಪಡಿಸುವುದು. ವಾರ್ಡ್-31ರಲ್ಲಿ ಎಲ್ಲೆಲ್ಲಿ ವಾರಕ್ಕೆ 2 ಬಾರಿ ಮತ್ತು ವಾರಕ್ಕೆ 1 ಬಾರಿ ನೀರು ನೀಡುತ್ತಿರುವುದರ ಬಗ್ಗೆ ಮಾಹಿತಿಯನ್ನು ಒದಗಿಸುವುದು. ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಮುಂದಿನ ಸಭೆಗೆ ತಪ್ಪದೇ ಹಾಜರಾಗಲು ಸೂಚಿಸಿದರು. ಅನ್ವರ್ ಲೇಔಟ್‌ಗೆ ಚಂದ್ರು ರವರನ್ನು ಕಳುಹಿಸದೆ ಬೇರೆ ಯಾರನ್ನಾದರೂ ಕಳುಹಿಸಲು ಸೂಚಿಸಿದರು. ಮುನೇಶ್ವರನಗರ ಮದ್ರಾಸ ಹತ್ತಿರ ಪ್ಲಾಸ್ಟಿಕ್ ಪೈಪ್‌ಗಳನ್ನು ಸರಿಪಡಿಸುವುದು, ವೇಣುಗೋಪಾಲಸ್ವಾಮಿ ದೇವಸ್ಥಾನದ ಹತ್ತಿರ ದುರಸ್ತಿಯಾಗಿರುವ ಪೈಪ್ ಸರಿಪಡಿಸುವುದು, ಪಿ.ವಿ.ಸಿ ಪೈಪ್‌ಗಳನ್ನು ಅಳವಡಿಸಿರುವುದನ್ನು ಬದಲಾಯಿಸುವುದು. ರಿಮೇಂಡಿಗ್ ಸ್ಯಾನಿಟರಿ ಲೈನ್ ಬಗ್ಗೆ ಮಾಹಿತಿ ನೀಡುವುದು. ಬಿಡಬ್ಲ್ಯೂಎಸ್‌ಎಸ್‌ಬಿ ಯಿಂದ ಎಷ್ಟು ಕೆಲಸ ನಿರ್ವಹಿಸಿರುವುದು ಹಾಗೂ ನಮ್ಮ ಕಡೆಯಿಂದ ಎಷ್ಟು ಕೆಲಸ ನಿರ್ವಹಿಸಿರುವುದರ ಬಗ್ಗೆ ಮಾಹಿತಿ ನೀಡುವುದು. ವಾಟರ್ ಮೀಟರ್ ರೀಡಿಂಗ್ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ, ಇದನ್ನು ಸರಿಪಡಿಸುವುದು, ವರ್ಕ ಪ್ರೋಗ್ರೆಸ್ ಬಗ್ಗೆ ವರದಿ ನೀಡುವುದು, ಮೀಟರ್ ಅಳವಡಿಸಿರುವುದರ ಬಗ್ಗೆ ಮಾಹಿತಿ ನೀಡುವುದು ಹಾಗೂ ಶಾಸಕರ ನಿಧಿಯಿಂದ ಎಷ್ಟು ಕೆಲಸವಾಗಿದೆ ಎಂಬುದರ ಬಗ್ಗೆ ಮಾಹಿತಿ ನೀಡುವುದು.

**3. ಆರೋಗ್ಯ ಇಲಾಖೆ:-**

ಗಲ್ಲಿಗಳಿಗೆ ಕಸ ತೆಗೆಯುವ ಗಾಡಿ ಬರುವಂತೆ ಕ್ರಮಕೈಗೊಳ್ಳುವುದು, ಅಶೋಕನಗರ ಸರ್ಕಾರಿ ಶಾಲೆ ಹಿಂದೆ ಹಾಕುತ್ತಿರುವ ಕಸವನ್ನು ತೆಗೆಯುವುದು, ಅಂಗಡಿಯ ವ್ಯಾಪಾರಿಗಳು ಹಾಕುತ್ತಿರುವ ಕಸದ ಬಗ್ಗೆ ಗುರುತಿಸಿ, ಅಂಗಡಿಗಳ ಲೈಸನ್ಸ್ ರದ್ದುಪಡಿಸುವ ಕ್ರಮಕೈಗೊಳ್ಳುವುದು., ತಮಿಳು ಶಾಲೆ ಹತ್ತಿರ ಯಾವುದಾದರೂ ಅಂಗಡಿಗೆ ಜಾಗ ನೀಡಿ ಕಸ ಹಾಕದಂತೆ ಕ್ರಮ ಕೈಗೊಳ್ಳುವುದು. ಕಸವನ್ನು ಹಾಕುತ್ತಿರುವ ವ್ಯಾಪಾರಿಗಳಿಗೆ ನೋಟಿಸ್‌ಗಳನ್ನು ನೀಡುವುದು, ಕಸವನ್ನು ರಸ್ತೆಯಲ್ಲಿ ಹಾಕದೇ ಕಸದ ಗಾಡಿಗೆ ಹಾಕುವಂತೆ ಸೂಚಿಸಿ ನೋಟೀಸ್ ನೀಡುವುದು. ಸಾಹುಕಾರ್ ಲೇನ್‌ನಲ್ಲಿ ಹಾಕಿರುವ ಕಸವನ್ನು ತೆರವುಗೊಳಿಸಿ ಯಾವುದಾದರೂ ಅಂಗಡಿಗೆ ಜಾಗವನ್ನು ನೀಡುವಂತೆ ಸೂಚಿಸಿದರು ಹಾಗೂ ಸಣ್ಣ ಸಣ್ಣ ಗಲ್ಲಿಗಳಿಗೆ ಚಿಕ್ಕ ಚಿಕ್ಕ ಕಸದ ಗಾಡಿಗಳನ್ನು ಕಳುಹಿಸಿ ಕಸವನ್ನು ಸಂಗ್ರಹಿಸಲು ಸೂಚಿಸಿದರು. ಡಿ.ಜೆ.ಹಳ್ಳಿ ಪೋಲೀಸ್ ಠಾಣೆ ಎದುರು ಹಾಕಿರುವ ಕಸವನ್ನು ತೆಗೆಯುವಂತೆ ಸೂಚಿಸಿದರು.

**4. ಕಾಮಗಾರಿ ಇಲಾಖೆ:-**

ವಾರ್ಡ್-31ರ ಕೆಲವು ಕಾಂಕ್ರೀಟ್ ರಸ್ತೆಗಳಲ್ಲಿ ಕಾಂಕ್ರೀಟ್ ಕೀತ್ತು ಹೋಗಿದ್ದು, ಅಂತಹ ಕಡೆಗಳಿಗೆ ಕಾಂಕ್ರೀಟ್ ಹಾಕಿ ಸರಿಪಡಿಸುವಂತೆ ಸೂಚಿಸಿದರು. ಸಹಾಯಕ ಕಾರ್ಯಪಾಲಕ ಅಭಿಯಂತರರನ್ನು ಮುಂದಿನ ಸಭೆಗೆ ಹಾಜರಾಗುವಂತೆ ಸೂಚಿಸಿ, ಸರ್ಕಾರದಿಂದ 225 ಚದರ ಅಡಿಗಳ ನಿವೇಶನಕ್ಕೆ ಮನೆ ನಿರ್ಮಿಸಿಕೊಡಲು ಆದ್ಯತೆ ಇದ್ದು, ಇಂತಹ ಅನುಕೂಲವನ್ನು ಪಡೆಯಲು ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ದಾಖಲೆಗಳನ್ನು ತಯಾರಿಸಿಕೊಡುವಂತೆ ಸೂಚಿಸಿದರು ಹಾಗೂ ವಾರ್ಡ್-31 ರಲ್ಲಿ ವಾರ್ಡ್ ಕಛೇರಿ ನಿರ್ಮಿಸಲು ಸ್ಥಳವನ್ನು ಗುರುತಿಸುವಂತೆ ಸೂಚಿಸಿದರು.

5. ಕಲ್ಯಾಣ ಇಲಾಖೆ:-

ವಾರ್ಡ್-31 ಸಂಬಂಧಿಸಿದಂತೆ ಕಲ್ಯಾಣ ಇಲಾಖೆಯಿಂದ ಬಡವರಿಗೆ ನೀಡುವ ಲ್ಯಾಪ್ ಟಾಪ್, ಆಟೋ ರೀಕ್ಷಾ, ಟೈಲರಿಂಗ್ ಯಂತ್ರ, ಕಾರುಗಳನ್ನು ಅರ್ಜಿ ಸಲ್ಲಿಸಿರುವ ಫಲಾನುಭವಿಗಳ ಪಟ್ಟಿಯಂತೆ ಪರಿಶೀಲಿಸಿ ನೀಡುವುದು ಹಾಗೂ ಟೈಲರಿಂಗ್ ತರಬೇತಿ ನೀಡಲು ಕ್ರಮ ವಹಿಸುವಂತೆ ಸೂಚಿಸಿದರು.

6. ಪೋಲಿಸ್ ಇಲಾಖೆ:-

ಟ್ರಾಫಿಕ್ ಪೋಲಿಸ್ ಇನ್ಸ್‌ಪೆಕ್ಟರ್ ರವರು ಸಭೆಗೆ ಗೈರು ಹಾಜರು ಆಗಿರುವುದರಿಂದ ಮುಂದಿನ ಸಭೆಗೆ ತಪ್ಪದೇ ಹಾಜರಾಗುವಂತೆ ಸೂಚಿಸಿದರು. ವಾರ್ಡ್-31ರ ಪಾರ್ಕ್‌ನಲ್ಲಿ ಪೋಲಿ ಹುಡುಗರು ದೂಮಪಾನ ಮತ್ತು ಗಾಂಜ ಹೊಡೆಯುವುದನ್ನು ನಿಯಂತ್ರಿಸುವುದು ಹಾಗೂ ಶಾಂಪುರ ಮುಖ್ಯರಸ್ತೆಯಲ್ಲಿ ಪೋಲಿಸ್‌ಗಳನ್ನು ನಿಯೋಜಿಸುವುದು ಹಾಗೂ ಕೆಲವು ಜಾಗಗಳಲ್ಲಿ ಪೋಲಿಸ್ ಚೌಕಿಗಳನ್ನು ನಿರ್ಮಿಸುವಂತೆ ಸೂಚಿಸಿದರು.

7. ಕಂದಾಯ ಇಲಾಖೆ:-

ಹೊಸದಾಗಿ ಮತದಾರರಪಟ್ಟಿಯಲ್ಲಿ ಹೆಸರು ನೊಂದಾಯಿಸಿರುವ ಮತದಾರರುಗಳಿಗೆ ಚುನಾವಣೆ ಗುರುತಿನ ಚೀಟಿಯನ್ನು ನೀಡಲು ಸೂಚಿಸಿದರು ಹಾಗೂ ಮತದಾರರಿಗೆ ಮತದಾನ ಮಾಡುವ ಬಗ್ಗೆ ಅರಿವೂ ಮೂಡಿಸಲು ಸೂಚಿಸಿರುವ ಸ್ಥಳದಲ್ಲೇ ಕಾರ್ಯಕ್ರಮ ಹಮ್ಮಿಕೊಂಡು ಜಾಗೃತಿ ಮೂಡಿಸುವಂತೆ ಸೂಚಿಸುತ್ತಾ, ಮುಂದಿನ ವಾರ್ಡ್ ಕಮಿಟಿ ಸಭೆಯನ್ನು ಅಧ್ಯಕ್ಷರು ಸೂಚಿಸುವ ಸ್ಥಳದಲ್ಲಿ ಮಾಡುವಂತೆ ಸೂಚಿಸಿ, ಇಂದಿನ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ಶ್ರೀಮತಿ ಉಮ್ಮೆ ಸಲ್ಮಾ ಖಮರ್ ಬಾಷಾ
ಸದಸ್ಯರು ಬಿ.ಬಿ.ಎಂ.ಪಿ
ಕುಶಾಲ್ ನಗರ್ ವಾರ್ಡ್ ನಂ. 31

ಕಾರ್ಯದರ್ಶಿ
ಸಹಾಯಕ ಕಂದಾಯ ಅಧಿಕಾರಿ
ಕಾಡುಗೊಂಡನಹಳ್ಳಿ ಉಪ ವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಪ್ರತಿಯನ್ನು:

1. ಪೂಜ್ಯ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
2. ಪೂಜ್ಯ ಉಪ ಮಹಾಪೌರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
3. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
4. ಮಾನ್ಯ ಜಂಟಿ/ಅಪರ ಆಯುಕ್ತರು (ಪೂರ್ವ) ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
5. ಮಾನ್ಯ ಜಂಟಿ ಆಯುಕ್ತರು (ಆರೋಗ್ಯ/ಎಸ್‌ಡಬ್ಲ್ಯೂಎಂ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
6. ಉಪ ಆಯುಕ್ತರು (ಪೂರ್ವ), ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
7. ಕಾರ್ಯದರ್ಶಿಗಳು, ಕೌನ್ಸಿಲ್ ಕಾರ್ಯಾಲಯ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
8. ವಾರ್ಡ್ ಸಮಿತಿಯ ಸದಸ್ಯರು. ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
9. ಕಂದಾಯ ಅಧಿಕಾರಿ (ಪುಲಕೇಶಿನಗರ), ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
10. ಸಹಾಯಕ ಕಾರ್ಯಪಾಲಕ ಅಭಿಯಂತರರು(ಪುಲಕೇಶಿನಗರ) ಎಸ್‌ಡಬ್ಲ್ಯೂಎಂ, ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.
11. ಸಹಾಯಕ ಕಾರ್ಯಪಾಲಕ ಅಭಿಯಂತರರು (ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.

14 ಸಹಾಯಕ ಅಭಿಯಂತರರು(ವಿದ್ಯುತ್/ಪುಲಕೇಶಿನಗರ) ಬಿಬಿಎಂಪಿ ರವರ ಅವಗಾಹನೆಗಾಗಿ ಕಳುಹಿಸಿದೆ.

15 ಕಛೇರಿ ಕಡತಕ್ಕೆ.